# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 01.01.2011**

## ***ಕರ್ತವ್ಯ ಲೋಪ : ಪಾಲಿಕೆ ಸಿಬ್ಬಂದಿ ಅಮಾನತು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ (ಜಯನಗರ) ಉಪ ವಲಯದ ವಾರ್ಡ್ ನಂ.60 ರಲ್ಲಿ 2008-09ನೇ ಸಾಲಿನಲ್ಲಿ ಕಂದಾಯ ವಸೂಲಾತಿಯ 22 ಸಂಖ್ಯೆಯ ತಿರಸ್ಕೃತ ಚೆಕ್ಕುಗಳ ಬಗ್ಗೆ ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ ಪಾಲಿಕೆಯ ಶ್ರೀ ಆರ್.ದೊರೈರಾಜ್, ಕಂದಾಯ ಪರಿವೀಕ್ಷಕರು, ಸಹಾಯಕ ಕಂದಾಯ ಅಧಿಕಾರಿ (ಬೊಮ್ಮನಹಳ್ಳಿ) ಉಪ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ಅವರು ಆದೇಶ ಹೊರಡಿಸಿದ್ದಾರೆ.

ದಿನಾಂಕ: 31.12.2010 ರಂದು ಸಂಜೆ 4.30 ಗಂಟೆಗೆ ಶ್ರೀ ಗಂಗಭೈರಯ್ಯ, ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಸಹಾಯಕ ಕಂದಾಯ ಅಧಿಕಾರಿ (ಜಯನಗರ) ಕಛೇರಿಗೆ ಭೇಟಿ ನೀಡಿ, 2008-09, 2009-10 ಮತ್ತು 2010-11ರ ಸಾಲಿನಲ್ಲಿ ಲೆಕ್ಕ ಪರಿಶೀಲನೆ ನಡೆಸಲು ವಿವರಗಳನ್ನು ನೀಡುವಂತೆ ಸೂಚಿಸಿ, 2008-09ರ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿದ್ದ ತಿರಸ್ಕೃತವಾಗಿರುವ ಚೆಕ್ಕುಗಳ ಬಗ್ಗೆ ಶ್ರೀ ಆರ್.ದೊರೈರಾಜ್, ಕಂದಾಯ ವಸೂಲಿಗಾರರಾಗಿ ಈ ಹಿಂದೆ ಸಹಾಯಕ ಕಂದಾಯ ಅಧಿಕಾರಿ (ಜಯನಗರ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಕಂದಾಯ ಪರಿವೀಕ್ಷಕರಾಗಿ ಬಡ್ತಿ ಹೊಂದಿ ಸಹಾಯಕ ಕಂದಾಯ ಅಧಿಕಾರಿ (ಬೊಮ್ಮನಹಳ್ಳಿ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಇವರು ಈ ಹಿಂದೆ ಕಂದಾಯ ವಸೂಲಿಗಾರರಾಗಿ ವಾರ್ಡ್-60 ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ 2008-09ನೇ ಸಾಲಿನಲ್ಲಿ 22 ಸಂಖ್ಯೆ ಚೆಕ್ಕುಗಳ ಒಟ್ಟು ರೂ.2,16,806/- ಗಳು ತಿರಸ್ಕೃತವಾಗಿರುವ ಚೆಕ್ಕುಗಳ ಬಗ್ಗೆ ಕ್ರಮ ತೆಗೆದುಕೊಂಡಿರುವ ಕುರಿತು ವರದಿ ನೀಡಲು ಸೂಚಿಸಿರುತ್ತಾರೆ. ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ (ಜಯನಗರ) ರವರು ದಿನಾಂಕ: 01.12.2010ರಲ್ಲಿ ಕಾರಣ ಕೇಳಿ ಪತ್ರ ನೀಡಿ ಸೂಚಿಸಲಾಗಿದ್ದರೂ ಸಹ ಯಾವುದೇ ವಿವರಗಳನ್ನು ಸದರಿ ನೌಕರರು ಸಲ್ಲಿಸಿರುವುದಿಲ್ಲ ಎಂದು ಅಧ್ಯಕ್ಷರ ಗಮನಕ್ಕೆ ತಂದರು.

ಹಾಗೂ ಸದರಿ ನೌಕರರು ದಿನಾಂಕ: 20.10.2010 ರಂದು ಸಹಾಯಕ ಕಂದಾಯ ಅಧಿಕಾರಿ (ಜಯನಗರ) ಕಛೇರಿಯಿಂದ ಬಿಡುಗಡೆ ಹೊಂದಿ ಸುಮಾರು 2 ತಿಂಗಳು ಕಳೆದರೂ ಸಹ ಪ್ರಭಾರವನ್ನು ವಹಿಸಿಕೊಡದೇ ಮತ್ತು ತಿರಸ್ಕೃತವಾಗಿರುವ ಚೆಕ್ಕುಗಳ ಬಗ್ಗೆ ಕ್ರಮಕೈಗೊಳ್ಳದೇ 1966ರ ಸರ್ಕಾರಿ ನೌಕರರ (ನಡತೆ) ನಿಯಮಾವಳಿ ನಿಯಮ 3 (iii) ನ್ನು ಉಲ್ಲಂಘಿಸಿ, ಕರ್ತವ್ಯಲೋಪವನ್ನು ಎಸಗಿರುತ್ತಾರೆ. ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಬಾಕಿ ಇರಿಸಿ, 1957ರ ಸಿ.ಸಿ.ಎ. ನಿಯಮಾವಳಿ 10ರ ಅನ್ವಯ ಸೇವೆಯಿಂದ ಅಮಾನತ್ತುಪಡಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 01.01.2011**

ಕರ್ನಾಟಕ ರಾಜ್ಯದ ಅಡ್ವೊಕೇಟ್ ಜನರಲ್ ಶ್ರೀ ಅಶೋಕ್ ಹಾರ್ನಳ್ಳಿರವರನ್ನು ಕೇಂದ್ರ ಸರ್ಕಾರವು ರಾಷ್ಟ್ರದ ಅತ್ಯುತ್ತಮ ಅಡ್ವೊಕೇಟ್ ಜನರಲ್ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 01.01.2011 ರಂದು ಸಂಜೆ 4.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀ ಎಸ್.ಕೆ. ನಟರಾಜ್ ರವರು ಶ್ರೀಯುತರಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಪೂಜ್ಯ ಮಹಾಪೌರರು ಮಾತನಾಡಿ, ಕರ್ನಾಟಕ ನಾಡಿನಲ್ಲಿ ಹುಟ್ಟಿ, ಇಂತಹ ಹೆಮ್ಮೆಯ ಗೌರವಕ್ಕೆ ಪಾತ್ರರಾಗಿದ್ದಾರೆ. ಇವರಿಗೆ ರಾಷ್ಟ್ರ ಪ್ರಶಸ್ತಿ ದೊರಕಿದ್ದು, ನಮ್ಮೆಲ್ಲರಿಗೂ ಸಂತೋಷದ ವಿಷಯ. ಪಾಲಿಕೆಗೆ ಕಳೆದ 20 ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಪಾಲಿಕೆಗೆ ಸಂಬಂಧಿಸಿದ ಹಲವಾರು ಖಟ್ಲೆಗಳಲ್ಲಿ (ಕೇಸ್) ಸಮರ್ಥವಾಗಿ ವಾದವನ್ನು ಮಂಡಿಸಿ, ಪಾಲಿಕೆಗೆ ನ್ಯಾಯವನ್ನು ದೊರಕಿಸಿಕೊಟ್ಟಿದ್ದಾರೆ. ಅವರಿಗೆ ಈ ಪ್ರಶಸ್ತಿ ಬಂದಿರುವುದು ಸಂತೋಷದ ವಿಷಯ ಎಂದು ತಿಳಿಸುತ್ತಾ, ಅಭಿನಂದನೆ ಸಲ್ಲಿಸಿದರು.

ಪಾಲಿಕೆಯ ಆಯುಕ್ತರು ಮಾತನಾಡಿ, ಶ್ರೀ ಅಶೋಕ್ ಹಾರ್ನಳ್ಳಿಯವರಿಗೆ ಪ್ರಶಸ್ತಿ ಬಂದಿರುವುದು ರಾಜ್ಯಕ್ಕೆ ಸಂದ ಹೆಮ್ಮೆಯ ಸಂಕೇತ. ಇಡೀ ರಾಷ್ಟ್ರದಲ್ಲಿ ಅತ್ಯುತ್ತಮ ಅಡ್ವೊಕೇಟ್ ಜನರಲ್ ಎಂದು ಆಯ್ಕೆಯಾಗಿ ರಾಷ್ಟ್ರಾಧ್ಯಕ್ಷರ ಪ್ರಶಸ್ತಿಗೆ ಪಾತ್ರರಾಗಿರುವುದು ಶ್ಲಾಘನೀಯ. ಪಾಲಿಕೆಗೆ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತು ಅನೇಕ ಕೇಸ್‌ಗಳನ್ನು ಗೆದ್ದು, ಕೋಟ್ಯಾಂತರ ಆಸ್ತಿಗಳನ್ನು ಪಾಲಿಕೆಗೆ ಉಳಿಸಿದ್ದಾರೆ. ಪ್ರಶಸ್ತಿಯನ್ನು ಪಡೆಯಬೇಕಾದರೆ ಕಾನೂನಿನ ವಿಷಯದಲ್ಲಿ ಆಸಕ್ತಿ, ಶ್ರದ್ಧೆ, ಜ್ಞಾನ ಎಷ್ಟಿದೆ ಎಂಬುದು ಅವರ ವ್ಯಕ್ತಿತ್ವದಿಂದ ಪರಿಚಯವಾಗುತ್ತದೆ. ಈ ವಿಭಾಗದಲ್ಲಿ ತುಂಬಾ ಪರಿಶ್ರಮ ಪಟ್ಟಿದ್ದಾರೆ. ಇದರ ಪ್ರತಿಫಲವಾಗಿ ಈ ಗೌರವ ಸಂದಿದೆ. ಈ ಪ್ರಶಸ್ತಿಯಿಂದ ರಾಜ್ಯದ ಕೀರ್ತಿಯನ್ನು ಎಲ್ಲೆಡೆಗೂ ಹರಡಲಿ ಎಂದು ಹಾರೈಸುತ್ತೇನೆಂದು ತಿಳಿಸಿದರು.

ಕೊನೆಯಲ್ಲಿ ಶ್ರೀ ಅಶೋಕ್ ಹಾರ್ನಳ್ಳಿಯವರು ಮಾತನಾಡಿ, ನಾನು ಈ ಕಾನೂನು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದನ್ನು ಗುರುತಿಸಿ, ನನಗೆ ಈ ರಾಷ್ಟ್ರ ಪ್ರಶಸ್ತಿಯನ್ನು ನೀಡಿದ್ದಾರೆ. ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನನಗೆ ಈ ಪ್ರಶಸ್ತಿ ಬಂದಿರುವ ವಿಚಾರ ಕೇವಲ ನನ್ನ ಆತ್ಮೀಯ ಸ್ನೇಹಿತರಲ್ಲಿ ಹಂಚಿಕೊಂಡಿದ್ದೆ. ಈ ವಿಷಯ ಪತ್ರಿಕೆಗಳಲ್ಲೂ ಪ್ರಕಟವಾದ ತಕ್ಷಣಕ್ಕೆ ಪೂಜ್ಯ ಮಹಾಪೌರರು ಇದನ್ನು ಗಮನಿಸಿ, ಮತ್ತೆ ನನಗೆ ಇಂದು ಪಾಲಿಕೆಯಿಂದ ಅಭಿನಂದನಾ ಸಮಾರಂಭ ಇಟ್ಟುಕೊಂಡಿದ್ದಾರೆ. ಎಲ್ಲರಿಗೂ ನನ್ನ ಧನ್ಯವಾದಗಳು. ನನ್ನ ವೃತ್ತಿ ಜೀವನದಲ್ಲಿ ಪಾಲಿಕೆ ನನಗೆ ಉತ್ತೇಜನ ನೀಡಿದೆ ಎಂದು ಭಾವಿಸುತ್ತೇನೆ. ಇನ್ನು ಮುಂದೆಯೂ ಕೂಡಾ ನಾನು ಪಾಲಿಕೆಯ ಸೇವೆಯಲ್ಲಿ ಸದಾ ಸಿದ್ಧನಾಗಿದ್ದೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಂದು ಪ್ರತ್ಯೇಕವಾದಂತಹ ಕಾಯ್ದೆಯ ಅವಶ್ಯಕತೆ ಇದೆ. ಅದು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಈ ಒಂದು ಕಾನೂನನ್ನು ಜಾರಿಗೊಳಿಸಿದರೆ ಪಾಲಿಕೆಯ ಆಡಳಿತ ಸುಗಮವಾಗಲಿದೆ ಮತ್ತು ಕಾನೂನಿನ ತೊಡಕುಗಳು ಕೂಡಾ ನಿವಾರಣೆಯಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ.ಎನ್. ಸದಾಶಿವ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ. ನಾಗರಾಜ್, ಪಾಲಿಕೆಯ ಸದಸ್ಯರುಗಳಾದ ಶ್ರೀ ಶಾಂತಕುಮಾರಿ, ಶ್ರೀ ಎಸ್. ಹರೀಶ್ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**